ದಿಃ03.12.2022 OS No. 13/2015 PW-1

ದಿಃ03.12.2022 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ. ಕೆ.ಎನ್.ಬಿ ವಕೀಲರಿಂದ

ವಾದಿಯು ಚನ್ನಪಟ್ಟಣದವರು ಆಗಿರುತ್ತಾರೆ. ನಾನು ರಾಂಪುರ ಗ್ರಾಮದವನು. ವಾದಿಯು ನಗರಸಭೆಯ ಸದಸ್ಯರು ಆಗಿರುತ್ತಾರೆ. ಅವರು ಕಳೆದ ಬಾರಿ ನಗರಸಭೆಯ ಸದಸ್ಯರು ಆಗಿದ್ದರು. ನಾನು ಫೋಟೋಗ್ರಫಿ ಮಾಡುತ್ತಿದ್ದು 15 ವರ್ಷಗಳಿಂದ ವಾದಿಯು ಪರಿಚಯವಿರುತ್ತಾರೆ. ವಾದಿಗೆ 45-46 ವರ್ಷ ವಯಸ್ಸಾಗಿರಬಹುದು. ನನಗೆ ಜಿ.ಪಿ.ಎ ಬರೆದುಕೊಟ್ಟಿರುತ್ತಾರೆ ಎಂದು ಹೇಳುವ ಕಾಲಕ್ಕೆ ವಾದಿಗೆ 42-43 ವರ್ಷ ವಯಸ್ಸಾಗಿತ್ತು. ಆ ಸಮಯದಿಂದ ವಾದಿಯು ಸಮಾಜಸೇವೆ ಮತ್ತು ರಾಜಕೀಯದಲ್ಲಿ ಇರುತ್ತಾರೆ ಎಂದರೆ ಸರಿ. ಮಂಗಳವಾರಪೇಟೆಯ ನಿವೇಶನ ಸಂಖ್ಯೆ 16 ಕ್ಕೆ ಸಂಬಂಧವಾಗಿ ವಾದಿಯು ಜಿ.ಪಿ.ಎ ಬರೆದುಕೊಟ್ಟಿದ್ದರು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಸಂಗತಿಗಳನ್ನು ತಿಳಿದುಕೊಂಡಿರುತ್ತೇನೆ.

ನಾನು 1 ನೇ ಪ್ರತಿವಾದಿಗೆ ಯಾವ ದಿನಾಂಕದಂದು ನೋಟೀಸು ನೀಡಿರುತ್ತೇನೆ ಎಂದು ದಿನಾಂಕ ಗೊತ್ತಿರುವುದಿಲ್ಲ. ನನಗೆ ದಾವಾ ಸ್ವತ್ತನ್ನು ಹೊರತು ಪಡಿಸಿ ವಾದಿಗೆ ಸೇರಿಂದತೆ ಎಷ್ಟು ಸ್ವತ್ತುಗಳು ಇರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ. ವಾದಿಯು ವ್ಯವಸಾಯ ಮತ್ತು ವ್ಯಾಪಾರವನ್ನು ಸಹ ಮಾಡುತ್ತಿದ್ದರು. ವಾದಿಗೆ ಸೇರಿದಂತೆ ಸಾತನೂರು ವೃತ್ತದ ಬಳಿ ಬಿರಿಯಾನಿ ಹೋಟಲ್ ಇತ್ತು. ವಾದಿಯು ಜಮೀನನ್ನು ಭೋಗ್ಯಕ್ಕೆ ಪಡೆದು ವ್ಯವಸಾಯ ಮಾಡಿಸುತ್ತಿದ್ದರು. ವಾದಿಯು ಎಷ್ಟು ಜನರಿಂದ ಆ ರೀತಿ ಜಮೀನನ್ನು ಭೋಗ್ಯಕ್ಕೆ ಪಡೆದಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಈ ಮೇಲೆ ಹೇಳಿದ ವಾದಿಯ ವೃತ್ತಿಗಳನ್ನು ಹೊರತುಪಡಿಸಿ ಅವರ ಬೇರೆ ವೃತ್ತಿಯ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಾದಿಗೆ ಇಬ್ಬರು ಅಣ್ಣಂದಿರು ಮತ್ತು ಒಬ್ಬ ಮಗಳು ಇರುತ್ತಾರೆ. ವಾದಿಯ ಸಹೋದರರು ಏನು ವೃತ್ತಿ ಮಾಡುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ವಾದಿಯು ನಮ್ಮ ಮನೆಗೆ ಕೆಲವು ಸಂದರ್ಭಗಳಲ್ಲಿ ಬಂದಿದ್ದರು. ನಮ್ಮ ಮನೆಯ ಗೃಹಪ್ರವೇಶದ ಕಾರ್ಯಕ್ರಮದಲ್ಲಿ ವಾದಿಯು ಬಂದಿದ್ದರು. ಅವರು ನನ್ನ

ಸ್ನೇಹಿತರಾದ ಕಾರಣ ಅವರನ್ನು ಆಮಂತ್ರಿಸಿದ್ದೆ. ನನಗೆ ವಾದಿಯು 15 ವರ್ಷಗಳಿಂದ ಪರಿಚಯವಿರುತ್ತಾರೆ. ನಾನು ಫೋಟೋಗ್ರಫಿ ವೃತ್ತಿ ಮಾಡುವುದರಿಂದ ವಾದಿಯು ನನಗೆ ಆರ್ಡರ್ ಗಳನ್ನು ಕೊಡಿಸುತ್ತಿದ್ದರು. ಆದ್ದರಿಂದ ನನಗೆ ಪರಿಚಯವಿರುತ್ತಾರೆ. ಮದುವೆ ಮತ್ತು ಗೃಹ ಪ್ರವೇಶಕ್ಕೆ ಆ ರೀತಿ ಆರ್ಡರ್ ಗಳನ್ನು ಕೊಡಿಸುತ್ತಿದ್ದರು.

ದಾವಾ ಸ್ವತ್ತು ಖಾನಾಷಿ ನಂಬರ್ ಆಗಿದ್ದು ಅದು 55/16 ಆಗಿರುತ್ತದೆ. ಅದು 30*40 ಅಡಿಗಳ ವಿಸ್ತೀರ್ಣವನ್ನು ಹೊಂದಿರುತ್ತದೆ. ಅದು ಪೂರ್ವ ಪಶ್ಚಿಮ 30 ಅಡಿ ಇರಬಹುದು. ಉತ್ತರ ದಕ್ಷಿಣ 40 ಅಡಿ ಇರಬಹುದು. ಸದರಿ ಸ್ವತ್ತಿನ ಪೂರ್ವಕ್ಕೆ ಮೊದಲು ಖಾಲಿ ಜಾಗ ಇತ್ತು ಈಗ ಏನು ಇದೆ ಗೊತ್ತಿರುವುದಿಲ್ಲ. ಪಶ್ಚಿಮಕ್ಕೆ ಮತ್ತು ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಖಾಲಿ ಜಾಗ ಇರುತ್ತದೆ. ನಾನು ದಾವಾ ಸ್ವತ್ತನ್ನು ಕೊನೆಯದಾಗಿ 2012 ರಲ್ಲಿ ನೋಡಿದ್ದೆ. ದಾವಾ ಸ್ವತ್ತಿನ ಅಕ್ಕ ಪಕ್ಕ ನಿವೇಶನಗಳು ಇರುತ್ತವೆ.

ಮುಂದಿನ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.